# ಅಂಶ - 7 ಸಂಸ್ಕೃತಿ ಮತ್ತು ಸಮಾಜ ಜೀವನ

**ವಿಷಯ ಕ್ರಮ**


7.0 ಉದ್ದೇಶ

7.1 ಪೀಠಿಕೆ

7.2 ಪಠ್ಯ

7.2.1 ಪಠ್ಯದಲ್ಲಿಯ ಕಠಿಣ ಶಬ್ದಗಳು

7.2.2 ಪಠ್ಯದಲ್ಲಿಯ ಮುಖ್ಯ ವಿಚಾರ

**ಅಭ್ಯಾಸ - 1**

**ಅಭ್ಯಾಸ - 2**

7.3 ವ್ಯಾಕರಣ ವಿಶೇಷಗಳು

ಸಾರಾಂಶ

**ಅಭ್ಯಾಸಗಳಿಗೆ ಉತ್ತರಗಳು**


## 7.0 ಉದ್ದೇಶ

ಈ ಅಂಶವನ್ನು ಓದಿದ ಮೇಲೆ ನೀವು

- ಸಂಸ್ಕೃತಿ ಮತ್ತು ಸಮಾಜ ಜೀವನದ ಪರಸ್ಪರ ಸಂಬಂಧವನ್ನು ಅರಿತುಕೊಳ್ಳುತ್ತೀರಿ.
- ಸಂಸ್ಕೃತಿಯು ಸದ್ಗುಣ ಸದ್ಭಾವನಾ ಸಂಪತ್ತಿನ ಸಾರಸರ್ವಸ್ವವು ಎಂಬುದನ್ನು ಮನಗೊಳ್ಳುವಿರಿ.
- ಸಮಾಜವು ಅಪಾಯಕ್ಕೆ ಈಡಾಗದೆ ಸುಗಮವಾಗಿ ನಡೆಯುವಂತೆ ಮಾಡುವ ಶಕ್ತಿಯೇ ಸಂಸ್ಕೃತಿ ಎಂಬುದನ್ನು ಗುರುತಿಸುತ್ತೀರಿ.
- ಸಮಾಜ ಜೀವನದ ಔನ್ನತ್ಯಕ್ಕಾಗಿ ಶ್ರಮಿಸುವಿರಿ. ಹಾಗೂ
- ನಿಮ್ಮ ಶಬ್ದ ಭಂಡಾರವನ್ನು ವೃದ್ಧಿಗೊಳಿಸಿಕೊಳ್ಳುವಿರಿ.

ಹಿಂದಿನ ಭಾಗದಲ್ಲಿ ಓದಿದ ಕನ್ನಡ ವ್ಯಾಕರಣವನ್ನು ಜ್ಞಾಪಿಸಿಕೊಂಡು ಈ ಅಂಶದಲ್ಲಿ ಅದನ್ನು ಉಪಯೋಗಿಸುವಿರಿ.

## 7.1 ಪೀಠಿಕೆ

ಪ್ರಸ್ತುತ ನಿಬಂಧವನ್ನು ಪದ್ಮಭೂಷಣ ಡಾ.ಬಿ. ಶಿವಮೂರ್ತಿ ಶಾಸ್ತ್ರಿಗಳು ಬರೆದಿರುವರು. ಅವರು ಕನ್ನಡ ಸಾಹಿತ್ಯ ಸಂಶೋಧನೆಗಳಿಗೆ ಸಂಬಂಧಪಟ್ಟ ಅನೇಕ ಗ್ರಂಥಗಳನ್ನು ರಚಿಸಿರುವರು. ಕರ್ನಾಟಕ ಏಕೀಕರಣಕ್ಕಾಗಿ ನಿರಂತರ ಪರಿಶ್ರಮ ಪಟ್ಟಿರುವರು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅದರ ಅಭಿವೃದ್ಧಿಗೆ ಕಾರಣರಾದರು.

ಸಂಸ್ಕೃತಿ ಸಮಾಜಗಳ ಪರಸ್ಪರ ಸಂಬಂಧವನ್ನು ಕುರಿತು ವಿವೇಚಿಸುವುದು ಪ್ರಸ್ತುತ ನಿಬಂಧದ ಉದ್ದೇಶ. ಸಂಸ್ಕೃತಿ ಎಂಬುದು ವ್ಯಾಖ್ಯಾನಕ್ಕೆ ಅತೀತವಾಗಿದೆಯೆಂದು ಹೇಳಿ ಹಲವಾರು ನಿದರ್ಶನಗಳಿಂದ ಕೆಲವು ವಿದ್ವಾಂಸರ ವ್ಯಾಖ್ಯಾನಗಳಿಂದ ಸಂಸ್ಕೃತಿಯ ಅರ್ಥವನ್ನು ಸ್ಪಷ್ಟಪಡಿಸಲಾಗಿದೆ. ಒಂದು ಜನಾಂಗದ ಸಾವಿರಾರು ವರ್ಷಗಳ ನಂಬಿಕೆಗಳು, ವಿಚಾರಗಳು, ನಡವಳಿಕೆಗಳು ಮುಂತಾದವುಗಳ ಪರಿಣಾಮವಾಗಿ ಆ ಸಮಾಜಕ್ಕೆ ದೊರೆತ ವಿಶಿಷ್ಟ ಸಂಸ್ಕಾರವೇ ಸಂಸ್ಕೃತಿ. ಸಭ್ಯತೆ, ನಾಗರಿಕತೆ, ವಿನಯಶೀಲತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ, ಕರ್ತವ್ಯದಕ್ಷತೆ, ಸತ್ಯಶೀಲತೆ, ಸ್ನೇಹ, ತ್ಯಾಗ, ದೇಶ ಭಾಷಾಭಿಮಾನ ಇವೇ ಮೊದಲಾದ ಗುಣಗಳ ಸಾರವೇ ಸಂಸ್ಕೃತಿ.

ಸಮಾಜಜೀವನಕ್ಕೆ ಸಂಸ್ಕೃತಿಯು ಸ್ಫೂರ್ತಿಯನ್ನು ನೀಡುತ್ತದೆ. ಸಮಾಜ ಮತ್ತು ಸಂಸ್ಕೃತಿ ಎರಡೂ ಪರಸ್ಪರ ಅವಿನಾಭಾವ ಸಂಬಂಧವುಳ್ಳವು. ವ್ಯಕ್ತಿ, ಕುಟುಂಬ, ಸಮಾಜ, ದೇಶ ಇವು ಪರಸ್ಪರ ಹೊಂದಿಕೊಂಡು ಒಂದುಗೂಡಿ ಮುಂದುವರಿಯುವಂತೆ ಮಾಡುವ ಮಹಾಶಕ್ತಿಯೆಂದರೆ ಸಂಸ್ಕೃತಿ. ಆ ಸಂಸ್ಕೃತಿ ವ್ಯಕ್ತಿ, ಕುಲ, ಗುಂಪುಗಳ ಪದ್ಧತಿ, ಆಚಾರ, ಅರಿವು, ತಿಳಿವು ಮುಂತಾದವುಗಳಿಂದ ವ್ಯಕ್ತವಾಗುತ್ತದೆ. ಪಾಂಡಿತ್ಯ ವಿದ್ವತ್ತು ಓದು, ಬರೆಹ ಮುಂತಾದವುಗಳಿಂದ ಇದು ಮಾರ್ಪಡುವುದಿಲ್ಲ. ಇಂತಹ ಸಾವಿರಾರು ಘಟಕಗಳು ಶತಶತಮಾನಗಳವರೆಗೆ ಆ ಸಮಾಜದಲ್ಲಿ ಮುನ್ನಡೆದು ಮಾಮರವು ಮಧುರ ಫಲವನ್ನು ಬಿಟ್ಟಂತೆ ಸಂಸ್ಕೃತಿಯ ಸಾರವನ್ನು ಅಭಿವ್ಯಕ್ತಗೊಳಿಸುತ್ತವೆ.

ಕರ್ನಾಟಕದ ಕಲೆಗಳು, ಶಿಲ್ಪಕೃತಿಗಳು, ಸಂಗೀತ ಸಾಹಿತ್ಯಾದಿಗಳು ಈ ಸಂಸ್ಕೃತಿಯ ಹಿರಿಮೆಯನ್ನು ಸಾರುತ್ತವೆ. ಮಹಾಸತಿಯ ಕಲ್ಲು, ವೀರಗಲ್ಲು, ಶಿಲಾಶಾಸನ, ಹಸ್ತಪ್ರತಿ ಇವು ನಮ್ಮ ಸಂಸ್ಕೃತಿಯ ಪ್ರತೀಕ.

## 7.2 ಪಠ್ಯ

(ಸಂಸ್ಕೃತಿ ಮತ್ತು ಸಮಾಜ ಜೀವನವನ್ನು ಕುರಿತು ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಬರೆದ ಲೇಖನದಿಂದ ಈ ಭಾಗವನ್ನು ಆಯ್ದುಕೊಳ್ಳಲಾಗಿದೆ).

ಮಾನವ ಜನಾಂಗದ ಸಾವಿರಾರು ವರ್ಷಗಳ ಬದುಕಿನ ಅನುಭವ ಆಲೋಚನೆಗಳ ಫಲವಾಗಿ ಬಂದ ನಡವಳಿಕೆಗಳನ್ನು ಸಂಸ್ಕೃತಿಯ ಮೂಲವೆಂದು ತಿಳಿಯಬಹುದು. 'ಸಂಸ್ಕೃತಿ' ಎಂಬುದು ಮಾತಿಗೆ ನಿಲುಕದೆ, ಶಬ್ದಕ್ಕೆ ಸಿಲುಕದೆ, ಜನರ ಆಚರಣೆಯ ರೀತಿ ನೀತಿಗಳಿಂದ ಅನುಭವಕ್ಕೆ ಗೋಚರವಾಗುವ ವಿಷಯ. ಈ ಸಂಸ್ಕೃತಿಯು ವ್ಯಕ್ತಿಗಾಗಲಿ, ಸಮಾಜಕ್ಕಾಗಲಿ ಒಂದೇ ದಿನ ಒಟ್ಟುಗೂಡಿ ಬರತಕ್ಕದ್ದಲ್ಲ. ತೆಂಗಿನ ಮರದೊಳಗಿರುವ ಕಾಯಿಯಲ್ಲಿ ರುಚಿಕಟ್ಟಾದ ನೀರು ಮತ್ತು ತಿರುಳು ಆ ವೃಕ್ಷದ ಹಲವಾರು ದಿನಗಳ ಪ್ರಯತ್ನದ ಫಲವಾಗಿ ಒಟ್ಟುಗೂಡುವಂತೆ ನೂರಾರು ಸಾವಿರಾರು ವರ್ಷಗಳ ನಡೆವಳಿಕೆ ತಿಳಿವಳಿಕೆಗಳ ಫಲವಾಗಿ ಸಮಾಜಕ್ಕೆ ಕೂಡಿಬರುವ ಸಂಸ್ಕಾರ ವಿಶೇಷವನ್ನು ನಾವು ಸಂಸ್ಕೃತಿ ಎಂದು ಕರೆಯಬಹುದು. ಸಮಾಜ ಜೀವನಕ್ಕೆ ಸಂಸ್ಕೃತಿಯು ಸ್ಫೂರ್ತಿಯನ್ನು ಕೊಡತಕ್ಕದು. ಆದುದರಿಂದ ಸಂಸ್ಕೃತಿಯ ಬಲವಿಲ್ಲದ ವ್ಯಕ್ತಿ, ಕುಟುಂಬ ಮತ್ತು ಸಮಾಜ ಇವು ವಾಸನೆಯಿಲ್ಲದ ಹೂವು, ಮಾಧುರ್ಯವಿಲ್ಲದ ಗಾನ, ರುಚಿಕಟ್ಟಿಲ್ಲದ ಊಟ, ಮಂಗಳ ವಾದ್ಯಗಳಿಲ್ಲದ ಮದುವೆ, ಲಾವಣ್ಯವಿಲ್ಲದ ಲಲನೆ - ಇವುಗಳ ಹಾಗೆ ವ್ಯರ್ಥವಾದುವು. ಜೇನುಹುಳುಗಳು ಗುಂಪುಕೂಡಿ ಹಲವಾರು ಕಾಡುಮೇಡುಗಳನ್ನು ಸುತ್ತಾಡಿ ಸಾವಿರಾರು ಪುಷ್ಪಗಳ ರಸವನ್ನು ಹೀರಿ ತಂದು ಮಧುರತಮವಾದ ಜೇನುತುಪ್ಪವನ್ನು ತಮ್ಮ ಗೂಡುಗಳಲ್ಲಿ ಸಿದ್ಧಗೊಳಿಸಿದಂತೆ ನಮ್ಮ ಹಿರಿಯರ ಸಾವಿರಾರು ವರ್ಷಗಳ ಜೀವನಾನುಭವ, ಪ್ರತಿಭೆ ಮತ್ತು ಪಾಂಡಿತ್ಯಗಳ ಫಲವಾಗಿ ನಮಗೆ ಇಂದು ಅಮೂಲ್ಯವಾದ ಸಂಸ್ಕೃತಿ ಹಸ್ತಗತವಾಗಿದೆ. ಅದನ್ನು ಉಳಿಸಿ ಬಳಸಿ ಬೆಳೆಸುವುದೂ ಅದರ ಪ್ರಯೋಜನಗಳನ್ನು ಪಡೆಯುವುದೂ ನಮ್ಮ ಕರ್ತವ್ಯವಾಗಿದೆ. ಹೂವು ಮತ್ತು ವಾಸನೆ, ಹಾಲು ಮತ್ತು ರುಚಿ, ಸಂಗೀತ ಮತ್ತು ಸುಖ, ಬೆಳುದಿಂಗಳು ಮತ್ತು ತಂಪು, ಮಂದಮಾರುತ ಮತ್ತು ಆನಂದ - ಇವು ಹೇಗೆ ಪರಸ್ಪರ ಅವಿನಾಭಾವ ಸಂಬಂಧದಿಂದ ಕೂಡಿವೆಯೋ ಹಾಗೆ ಸಂಸ್ಕೃತಿ ಮತ್ತು ಸಮಾಜಜೀವನ ಇವು ನಿಕಟವಾದ ಸಂಬಂಧವನ್ನು ಪಡೆದಿವೆ.

ವಿಶ್ವದ ಸೃಷ್ಟಿಯಲ್ಲಿ ಪ್ರಾಣಿವರ್ಗಕ್ಕಿಂತ ಮನುಷ್ಯ ಕುಲವು ಕೆಲವು ಶ್ರೇಷ್ಠವಾದ ಗುಣಗಳಿಂದ ಕೂಡಿದೆ. ದೇಹ ಸೌಂದರ್ಯ, ಶರೀರ ಬಲ ಮತ್ತು ವ್ಯಾವಹಾರಿಕ ಮೌಲ್ಯತೆಗಳಲ್ಲಿ ಪ್ರಾಣಿಗಳು ಮನುಷ್ಯನಿಗಿಂತ ಮಿಗಿಲಾಗಿವೆ. 'ಮೊಲನಿಂದ ಕರಕಷ್ಟ ಕಾಣಾ ನರನ ಬಾಳುವೆ' ಎಂಬಲ್ಲಿ ಇದೇ ಅರ್ಥ ಅಭಿವ್ಯಕ್ತವಾಗಿದೆ. ಆದರೆ ಮಾನವರು ಆತ್ಮಶಕ್ತಿ, ಬುದ್ಧಿಶಕ್ತಿ, ಪ್ರತಿಭಾಶಕ್ತಿ ಮೊದಲಾದ ಮಹದ್ಗುಣಗಳಿಂದ ಸಕಲ ಪ್ರಾಣಿಗಳಿಗಿಂತಲೂ ಶ್ರೇಷ್ಠರಾಗಿದ್ದಾರೆ. ಇತರ ಪ್ರಾಣಿಗಳಿಗಿಲ್ಲದಿರುವ ಆಲೋಚನಾ ಶಕ್ತಿ, ವಾಕ್‌ಶಕ್ತಿ ಮುಂತಾದುವನ್ನು ಮನುಷ್ಯರು ಪಡೆದಿದ್ದಾರೆ. ಈ ಶಕ್ತಿಗಳನ್ನು ಉಪಯೋಗಿಸಿಕೊಂಡ ಮನುಷ್ಯರೇ ಸುಸಂಸ್ಕೃತರೆನಿಸಿಕೊಳ್ಳುತ್ತಾರೆ. ಹೀಗಲ್ಲದವರು ಅಸಂಸ್ಕೃತರು, ಅನಾಗರಿಕರು, ಅಸಭ್ಯರು ಎನಿಸಿಕೊಳ್ಳುವರು. ಸಮಾಜ ಜೀವನದ ಸುಖ ಸಂತೋಷಗಳಿಂದ ಅಂತಹವರು ವಂಚಿತರಾಗುತ್ತಾರೆ.

ಯೋಗ್ಯನಾದ ಮನುಷ್ಯನು ತಾನು ಸುಖವಾಗಿಯೂ ಸಂತೋಷಮಯವಾಗಿಯೂ ಬದುಕುವುದಕ್ಕೆ ಪ್ರಯತ್ನಿಸುವುದಲ್ಲದೆ ತನ್ನ ನೆರೆಹೊರೆ, ಸಮಾಜ ಮತ್ತು ದೇಶ ಬಾಂಧವರು ಕೂಡ ಸುಖ ಸಂತೋಷಗಳಿಂದ ಬದುಕಿ ಬಾಳಲು ಪ್ರಯತ್ನಿಸುತ್ತಾನೆ. ಏತಕ್ಕೆಂದರೆ ಇಂದು ನಾವು ಪಡುವ ಸುಖಸಂತೋಷಗಳಿಗೆ ಕಾರಣಗಳಾದ, ನಾವು ವಾಸಮಾಡುವ ಮನೆ, ಓದುವ ಪುಸ್ತಕ, ತೊಡುವ ವಸ್ತ್ರಾಭರಣಗಳು, ಉಪಯೋಗಿಸುವ ಭೋಜನ ಸಾಮಗ್ರಿಗಳು ಇವೆಲ್ಲವೂ ನಮಗೆ ನಮ್ಮ ನಾಡಿನ ಜನತೆಯಿಂದ ಪ್ರಾಪ್ತವಾಗಿವೆ. ಅವರೆಲ್ಲರೂ ಸಮಾಜ ಜೀವನದ ಸುವ್ಯವಸ್ಥೆಗಾಗಿ ಪ್ರಯತ್ನಿಸಿದ್ದರ ಫಲವೇ ಇಂದಿನ ನಮ್ಮ ಸುಖಸಂತೋಷಗಳು. ಆದುದರಿಂದ ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶ ಇವು ಪರಸ್ಪರ ಸಂಬಂಧವುಳ್ಳವುಗಳು. ಈ ಸಂಬಂಧಗಳು ಗಂಗಾ ಪ್ರವಾಹದಂತೆ ಮುಂದುವರಿದುಕೊಂಡು ಬರುವಂತೆ ಮಾಡುವುದೇ ನಮ್ಮ ಸಂಸ್ಕೃತಿಯ ಪ್ರಭಾವ; ಇದು ಮಂತ್ರ ಶಕ್ತಿ.

ಸಂಸ್ಕೃತಿ ಎಂಬ ಶಬ್ದವು ಧರ್ಮ, ದೇವರು, ಸತ್ಯ ಮೋಕ್ಷ ಇತ್ಯಾದಿ ಶಬ್ದಗಳ ಹಾಗೆ ವಿಶಾಲವೂ ನಿಗೂಢವೂ ಆದ ಅರ್ಥವುಳ್ಳದ್ದು; ಬಹುಮುಖವಾದುದು, ವಿಶಾಲಾರ್ಥವುಳ್ಳದ್ದು. ಸಂಸ್ಕೃತಿ ಎಂಬ ಶಬ್ದಕ್ಕೆ ಇದುವರೆಗೆ ಹೀಗೆಯೇ ಸರಿ ಎಂಬಂತೆ ಯಾರೂ ಅರ್ಥವನ್ನು ಹೇಳಿದಂತೆ ಕಂಡುಬಂದಿಲ್ಲ. ಪಾಶ್ಚಾತ್ಯ ಭಾಷೆಗಳಲ್ಲಿ ಬಳಕೆಯಲ್ಲಿರುವ

Culture ಎಂಬ ಶಬ್ದಕ್ಕೆ ಪ್ರತಿಯಾಗಿ ನಾವು ಸಂಸ್ಕೃತಿ ಎಂಬ ಶಬ್ದವನ್ನು ಬಳಸುತ್ತೇವೆ. ಒಟ್ಟಿನಲ್ಲಿ ಸಭ್ಯತೆ, ನಾಗರಿಕತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ, ಇಂಗಿತಜ್ಞತೆ, ಕರ್ತವ್ಯ ದಕ್ಷತೆ, ಸತ್ಯಶೀಲತೆ, ಗುರುದೇವತಾ ಭಕ್ತಿ, ದೇಶಭಾಷಾಭಿಮಾನ, ತ್ಯಾಗಗುಣ, ಶುಚಿತ್ವ, ಸ್ನೇಹಪರತೆ ಇತ್ಯಾದಿ ಸದ್ಗುಣ ಸಂಪತ್ತಿನ ಸಾರಸರ್ವಸ್ವವೇ ಸಂಸ್ಕೃತಿ.

ಸಂಸ್ಕೃತಿ ಎಂಬುದಕ್ಕೆ ಪ್ರಪಂಚದ ವಿದ್ವಾಂಸರು ಬಗೆಬಗೆಯಾಗಿ ಅರ್ಥಮಾಡಿದ್ದಾರೆ. ನಾಗರಿಕ ಪಾಮರ ಕುಲಗಳಲ್ಲಿ ಕಾಣಬರುವ ತಿಳಿವು, ಅರಿವು ಅದೇ ಜನತೆಯ ಸಂಸ್ಕೃತಿ ಎಂದು ಒಬ್ಬರೂ, ಒಂದು ದೇಶದಲ್ಲಿರುವ ವ್ಯಕ್ತಿಗಳ, ಕುಲಗಳ, ಗುಂಪುಗಳ ಪದ್ಧತಿಗಳು, ಆಚಾರಗಳು, ನಂಬಿಕೆಗಳು, ಸಂಸ್ಕೃತಿ ಎಂದು ಇನ್ನೊಬ್ಬರೂ ಅರ್ಥೈಸಿದ್ದಾರೆ. ವೈದುಷ್ಯಾದಿಗಳಿಂದ ಬದಲಾಗದೆಕುಲಕುಟುಂಬಗಳಲ್ಲಿ ಬಳಕೆಯಲ್ಲಿರುವ ಆಚಾರ, ನಂಬಿಕೆಗಳು ಸಂಸ್ಕೃತಿ ಎಂದು ಮತ್ತೊಬ್ಬರು ಹೇಳಿದರು. ಪ್ರಾಚೀನ ಕಾಲದ ಮನೋವೇದನೆಯ ಪ್ರಕಟರೂಪವೇ ಜನತೆಯ ಸಂಸ್ಕೃತಿ ಎಂದು ಮಗುದೊಬ್ಬರು ವ್ಯಾಖ್ಯಾನಿಸಿರುವರು. ಹೀಗೆ ಸಂಸ್ಕೃತಿಯ ಅರ್ಥವು ಸರಸ್ವತೀ ನದಿಯಂತೆ ಗುಪ್ತಗಾಮಿನಿಯಾಗಿ ಹಿಮಾಲಯದ ಗೌರೀಶಂಕರದಂತೆ ಗಗನ ಚುಂಬಿತವಾಗಿ ಶಾಂತಸಾಗರದ ವೈಶಾಲ್ಯದಂತೆ ಅತಿ ವ್ಯಾಪಕವಾಗಿ ಕಂಡುಬರುತ್ತದೆ. ಅದರ ಪ್ರಭಾವ ಎಲ್ಲ ನಾಗರಿಕ ಸಮಾಜಗಳ ಮೇಲೆ ಉಂಟಾಗಿಯೇ ಇದೆ. ಇದರಲ್ಲಿಯೇ ಸಂಸ್ಕೃತಿಯ ಚೈತನ್ಯ ಮಹತ್ವ ಶಕ್ತಿ ತುಂಬಿಕೊಂಡಿದೆ ಎಂದು ಹೇಳಬಹುದು.

ಮನುಷ್ಯನು ಸಮಾಜ ಜೀವಿ. ಕೆಲಮಟ್ಟಿಗೆ ಪ್ರಾಣಿಗಳಲ್ಲಿಯೂ ನಾವು ಈ ಗುಣವನ್ನು ಕಾಣ ಬಹುದು. ಇರುವೆಗಳು, ಜೇನುಹುಳುಗಳು, ಕಪಿಗಳು, ಆನೆಗಳು, ಪಕ್ಷಿಗಳು ಹಿಂಡುಹಿಂಡಾಗಿ ವಾಸಿಸುವುದನ್ನು ನಾವು ನೋಡುತ್ತಿದ್ದೇವೆ. ಮನುಷ್ಯನಿಗೆ ಮಾತ್ರ ಒಂಟಿಯಾಗಿರುವುದು ಸಾಧ್ಯವಿಲ್ಲ. ಮಾನವನು ಹುಟ್ಟುವಾಗ, ಸಾಯುವಾಗ, ರೋಗರುಜಿನಗಳಿಗೆ ತುತ್ತಾದಾಗ ಇನ್ನೊಬ್ಬರ ಆಶ್ರಯವಿಲ್ಲದೆ ಬದುಕುವುದು ಕಷ್ಟ. ಒಂದು ದೃಷ್ಟಿಯಿಂದ ಮಾನವನು ಎತ್ತಿದವರ ಕೈಗೂಸು. ಅಷ್ಟುಮಟ್ಟಿಗೆ ಅವನು ಸಮಾಜ ಜೀವಿ. ತನ್ನ ಜೀವನದ ಸುಖದು:ಖ ಸಮಯದಲ್ಲಿ, ಕಷ್ಟನಷ್ಟಗಳ ಕಾಲದಲ್ಲಿ ಅರಿವು ಆಲೋಚನೆಗಳ ಸಂದರ್ಭಗಳಲ್ಲಿ ಇತರರ ನೆರವನ್ನು ಮನುಷ್ಯನು ಬಯಸುತ್ತಾನೆ. ಆದುದರಿಂದಲೇ ಮಾನವನು ಸಮಾಜಜೀವಿ ಎಂದು ಹೇಳುವುದು. ಈ ಕಾರಣದ ದೆಸೆಯಿಂದ ವ್ಯಕ್ತಿ ಮತ್ತು ಸಮಾಜಗಳ ಸುಖಸಂತೋಷಗಳು, ಆಗುಹೋಗುಗಳು, ಹಿತಾಹಿತಗಳು, ಪ್ರಯೋಜನ ಪ್ರಗತಿಗಳು ಪರಸ್ಪರ ಸಂಬಂಧವುಳ್ಳವುಗಳೆಂದು ಸಿದ್ಧವಾಗುತ್ತದೆ. ಕಾರಣ ವ್ಯಕ್ತಿ ಮತ್ತು ಸಮಾಜ ಪರಸ್ಪರ ಹಿತದೃಷ್ಟಿಯಿಂದ ಹೊಂದಿಕೊಂಡು ನಡೆಯುವುದು ಅಗತ್ಯ; ಅನಿವಾರ್ಯ. ಇದಕ್ಕೆ ವ್ಯತಿರಿಕ್ತವಾಗಿ ಹೋದಾಗ ವ್ಯಕ್ತಿ ಅಥವಾ ಸಮಾಜ ಕಂಬಿಗಳನ್ನು ಬಿಟ್ಟ ರೈಲುಗಾಡಿಯಂತೆ ಅಪಾಯಕ್ಕೆ ಈಡಾಗುತ್ತದೆ. ವ್ಯಕ್ತಿ ಸಮಾಜಗಳೆರಡೂ ಅಪಾಯಕ್ಕೆ ಈಡಾಗದ ಹಾಗೆ ಸಮಾಜ ಜೀವನವು ಸುಗಮವಾಗಿ, ಸುಖವಾಗಿ ನಡೆಯುವಂತೆ ಮಾಡುವ ಹಿನ್ನೆಲೆಯ ಶಕ್ತಿಯೇ ಸಂಸ್ಕೃತಿ. ಈ ಜನತಾ ಸಂಸ್ಕೃತಿ ಸಮಾಜವನ್ನು ಸಂರಕ್ಷಿಸುವ ಮಂತ್ರಶಕ್ತಿ.

ಪ್ರಪಂಚದ ಹಿತಾಕಾಂಕ್ಷಿಗಳಾದ ಋಷಿಗಳು, ಆಚಾರ್ಯರು, ಪ್ರವಾದಿಗಳು, ಅವತಾರ ಪುರುಷರು, ಶರಣರು, ಭಾಗವತರು, ಸಾಧುಸಂತರು, ಕಲಾವಿದರು, ಕವಿಶ್ರೇಷ್ಠರು ತಮ್ಮ ಜೀವನಾನುಭವಗಳನ್ನು ಮುಂದಿನವರ ಏಳಿಗೆಯ ನಿಮಿತ್ತ ಗ್ರಂಥರೂಪವಾಗಿ ಅನುಗ್ರಹಿಸಿರುತ್ತಾರೆ. ಪ್ರಪಂಚದ ಎಲ್ಲ ಕಾಲ ದೇಶಗಳಲ್ಲಿಯೂ ಮಹಾತ್ಮರು ಉದಯಿಸಿರುವರೆಂದು ಚರಿತ್ರೆ ಹೇಳುತ್ತದೆ. ಕಳ್ಳತನ, ಸುಳ್ಳು, ಮೋಸ, ವ್ಯಭಿಚಾರ, ಆತ್ಮಸ್ತುತಿ, ಪರನಿಂದೆ, ದೇಶದ್ರೋಹ ಮೊದಲಾದ ದುರ್ಗುಣಗಳು ಸಮಾಜಕ್ಕೆ ಕಂಟಕಪ್ರಾಯವಾದವುಗಳೆಂದು ಹೇಳಿದ್ದಾರೆ. ''ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಇದೇ ಅಂತರಂಗಶುದ್ಧಿ; ಇದೇ ಬಹಿರಂಗ ಶುದ್ಧಿ'' - ಎಂಬ ಉಪದೇಶವು ಸಮಾಜ ಜೀವನವು ಸುಗಮವಾಗಿ ನಡೆಯಲು ಸಾಧಾರವಾಗಿದೆ. ಇದು ಸಂಸ್ಕೃತಿಯ ಸಾರಸರ್ವಸ್ವವನ್ನೊಳಗೊಂಡಿದೆ.

ಪುಣ್ಯದ ಬೀಡಾದ ಕನ್ನಡ ನಾಡಿನಲ್ಲಿ ಸತ್ಯದ ಬಲ, ಬೆಲೆ ಮೊದಲಿನಿಂದಲೂ ಅಧಿಕವಾಗಿಯೇ ಇದ್ದಂತೆ ಕಂಡುಬರುತ್ತದೆ. ''ಹರನೆಂಬುದೇ ಸತ್ಯ ಸತ್ಯವೆಂಬುದೆ ಹರನು'', ''ಸತ್ಯವ ನುಡಿವುದೇ ದೇವಲೋಕ, ಮಿಥ್ಯೆಯ ನುಡಿವುದೇ ಮರ್ತ್ಯ ಲೋಕ'' ಎಂಬ ಉಕ್ತಿಗಳು ಸತ್ಯ ಮಿಥ್ಯೆಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ನಮ್ಮಲ್ಲಿ ಎಲ್ಲರಿಗೂ ಪ್ರಿಯವಾದ ಗೋವಿನ ಕಥೆಯಲ್ಲಿ ಸತ್ಯನ ಹಿರಿಮೆ ಕಂಡುಬರುತ್ತದೆ. ಹುಲಿಯ ಬಾಯಿಗೆ ತುತ್ತಾಗಲು ಸಿದ್ಧವಾಗಿದ್ದ ಒಂದು ಗೋವು ''ಸತ್ಯವೆಂಬುದೆ ತಾಯಿ ತಂದೆ! ಸತ್ಯವೆಂಬುದೆ ಬಂಧುಬಳಗವು!! ಸತ್ಯವಾಕ್ಯಕೆತಪ್ಪಿ ನಡೆದರೆ ಮೆಚ್ಚನಾ ಜಗದೀಶನು'' ಎಂಬ ಸತ್ಯಸಂದೇಶವನ್ನು ತನ್ನ ಕರುವಿಗೆ ಕೊಟ್ಟು ಹೋಗುತ್ತದೆ. ಈ ಗೋವಿನ ಕಥೆಯು, ಸತ್ಯವು ಕೇವಲ ಮಾನವ ಕುಲಕ್ಕಷ್ಟೇ ಅಲ್ಲ, ಪ್ರಾಣಿಲೋಕಕ್ಕೂ ಅಗತ್ಯ ಎಂಬ ಘನವಾದ ತತ್ವವನ್ನು ಬೋಧಿಸುತ್ತದೆ. ಸ್ವಾಮಿ ಭಕ್ತಿ ಸಂಪನ್ನವಾದ ನಾಯಿ ಮೊದಲಾದ ಕೆಲವು ಪ್ರಾಣಿಗಳಲ್ಲಿ ಕೂಡ ಕೃತಜ್ಞತೆಯ ಸದ್ಗುಣವನ್ನು ನೋಡುತ್ತೇವೆ. ಅಂದಮೇಲೆ ಸಮಾಜ ಜೀವಿಯಾದ ಮಾನವನು ಸಂಸ್ಕೃತಿಯ ಸಾರವಾದ ಸತ್ಯವನ್ನು ಆಶ್ರಯಿಸಬೇಕಾದುದು ಅಗತ್ಯವಲ್ಲವೆ?

ಸಮಾಜ ಜೀವನವು ಪರಿಶುದ್ಧವಾಗಬೇಕಾದರೆ ಸತ್ಯದ ಜತೆಯಲ್ಲಿಯೇ ಅಹಿಂಸೆ ಕಾರ್ಯಶ್ರದ್ಧೆ, ಸ್ನೇಹಪರತೆ, ಅನುಕಂಪ, ಸಹಿಷ್ಣುತೆ, ಸಹೃದಯ ಭಾವ, ಪರೋಪಕಾರ ಬುದ್ಧಿ ಮೊದಲಾದ ಸದ್ಗುಣಗಳು ಜನಜೀವನದಲ್ಲಿ ಅಳವಡುವುದು ಅತ್ಯಗತ್ಯ. ಇಂತಹ ಉದಾತ್ತ ಗುಣಗಳನ್ನು ಜಗತ್ತಿಗೆ ಬೋಧಿಸುವ ಸಲುವಾಗಿಯೋ ಎಂಬಂತೆ ಅನೇಕ ದೇವಮಾನವರು ಆಗಿಹೋಗಿರುತ್ತಾರೆ. ಅವರ ಉಪದೇಶಗಳನ್ನು ಸ್ಮರಿಸಿಕೊಂಡು ಆಚರಿಸುವುದು ಸಮಾಜ ಜೀವನದ ಪ್ರಗತಿಯ ದೃಷ್ಟಿಯಿಂದೆ ಸಂಸ್ಕೃತಿಯ ಸಂರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯವಲ್ಲವೆ?

ಜಗತ್ತಿನ ಯಾವ ಭಾಗದಲ್ಲಿ, ಯಾವ ಕಾಲದಲ್ಲಿ ನೋಡಿದರೂ ಮಾನವಕುಲದ ಆಶೆ-ಆಕಾಂಕ್ಷೆ, ಸುಖ-ದುಃಖ, ಕಾಮ-ಪ್ರೇಮ, ಹಸಿವು-ತೃಷೆ, ಕ್ರೋಧ-ಲೋಭ, ನಿದ್ರೆ-ಆಲಸ್ಯ, ಅಹಂಕಾರ-ಮಮಕಾರ ಮೊದಲಾದ ಗುಣಗಳು ಸಮಾನವಾಗಿಯೇ ತೋರಿಬರುತ್ತವೆ. ಮಾನವ ಕುಲಕ್ಕೆ ಏಕಪ್ರಕಾರದ ಗುಣಶೀಲಗಳಿರುವುದು ಸಹಜವಾಗಿದೆ.

ನಮ್ಮದೇಶದಲ್ಲಿ ಸಾವಿರಾರು ವರ್ಷಗಳಿಂದ ಸಂಸ್ಕೃತಿಯ ಪ್ರವಾಹ ಒಂದೇ ಪ್ರಕಾರವಾಗಿ ಹರಿದುಬಂದಿದೆ. ಬಹಳ ಹಿಂದಿನ ಕಾಲದಿಂದಲೂ ತಂದೆ-ತಾಯಿ, ಗುರು ಮತ್ತು ಅತಿಥಿಗಳಿಗೆ ಹೆಚ್ಚಿನ ಮನ್ನಣೆಯನ್ನು ಕೊಡುವ ಸಂಪ್ರದಾಯ ಉಂಟು. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ ಎಂಬ ಉಕ್ತಿಗಳು ಈ ಸಂಸ್ಕೃತಿಯನ್ನು ಉಗ್ಗಡಿಸುತ್ತವೆ. ಸತ್ಯಂವದ, ಧರ್ಮಂಚರ, ಪರೋಪಕಾರ: ಪುಣ್ಯಾಯ; ಪಾಪಾಯ ಪರಪೀಡನಂ ಇತರರಿಗೆ ಉಪಕಾರ ಮಾಡುವುದು ಪುಣ್ಯ; ಇತರರನ್ನು ಹಿಂಸಿಸುವುದು ಪಾಪ - ಇಂತಹ ಉನ್ನತೋನ್ನತ ಸಂದೇಶವನ್ನು ಕವಿಗಳೂ ದಾರ್ಶನಿಕರೂ ಸಾರುತ್ತ ಬಂದಿದ್ದಾರೆ.

ಹಿಮಾಲಯದಿಂದ ರಾಮೇಶ್ವರದವರೆಗೆಭಾರತದಲ್ಲಿ ನಾವು ಕಾಣುವುದು ಒಂದೇ ಒಂದು ಭಾರತೀಯ ಸಂಸ್ಕೃತಿಯನ್ನು. ಭಾಷೆ ಬೇರೆಯಾದರೂ ವೇಷ ಭಿನ್ನವಾದರೂ ಜನರ ಭಾವನೇ ಒಂದೇ; ಅವರ ನೀತಿ ಧರ್ಮ ಒಂದೇ ಆಗಿವೆ. ನಮ್ಮ ಸಂಸ್ಕೃತಿಯ ಮಹತಿ ವ್ಯಾಪ್ತಿಗಳಿರುವುದು ಇಲ್ಲಿಯೆ.

ದೇವರು ಒಬ್ಬನೇ; ಎಲ್ಲ ಭಾಷೆಗಳ ತಾಯಿ ಸರಸ್ವತಿ. ದಯೆಯೇ ಧರ್ಮದ ಮೂಲ; ಎಲ್ಲರ ಹಿತವನ್ನು ಬಯಸುವುದೇ ನೈಜ ಧರ್ಮದ ಗುರಿ. ಆತ್ಮಸಾಕ್ಷಿಯಾಗಿ ಪರೋಪಕಾರಿಯಾಗಿ ನಡೆಯುವುದೇ ಭಾರತೀಯ ಸಂಸ್ಕೃತಿಯ ಮುಖ್ಯ ಧ್ಯೇಯ.

ನಮ್ಮ ಕನ್ನಡ ನಾಡಿನಲ್ಲಿ ಕಂಗೊಳಿಸುತ್ತಿರುವ ಭವ್ಯವಾದ ದೇವಾಲಯಗಳು ಗೋಮಟೇಶ್ವರನಂತಹ ಮೂರ್ತಿಗಳು, ಶಿಲಾಶಾಸನಗಳು, ವೀರಗಲ್ಲುಗಳು, ಮಹಾಸತಿಯ ಕಲ್ಲುಗಳು, ನಿಷಧಿಗಲ್ಲುಗಳು, ಗೋಗ್ರಹಣ ಕಲ್ಲುಗಳು, ತಾಳೆಯೋಲೆ ಗ್ರಂಥಗಳು, ಬಗೆಬಗೆಯ ವಿಗ್ರಹಗಳು, ಅಜಂತೆಯ ಚಿತ್ರಗಳು - ಇವೆಲ್ಲ ನಮ್ಮ ಜನರ ಶ್ರೇಷ್ಠಗುಣದ ನಿದರ್ಶನಗಳಾಗಿವೆ. ವೀರಗಲ್ಲುಗಳು ಪರಾಕ್ರಮಕ್ಕೆ ಶಿಲಾಶಾಸನ ತಾಮ್ರಶಾಸನಗಳು ದಾನಗುಣಕ್ಕೆ ಮಹಾಸತಿಕಲ್ಲುಗಳು ಪಾತಿವ್ರತ್ಯಕ್ಕೆ ನಿಷಧಿಕಲ್ಲುಗಳು ಅಹಿಂಸಾತತ್ವಕ್ಕೆ ಸ್ಪಷ್ಟವಾದ ಸಂಕೇತವೆಂಬಂತಿವೆ. ಇವೆಲ್ಲ ನಮ್ಮ ಸಂಸ್ಕೃತಿ ಜೀವಂತವಾದುದು, ಬಲಶಾಲಿಯಾದುದು ಎಂಬುದನ್ನು ಜಗತ್ತಿಗೆ ತೋರಿಸಿಕೊಡಲು ಸಹಾಯಕವಾಗಿವೆ. ನಮ್ಮ ಜನಗಳಲ್ಲಿರುವ ಆಚಾರ ವಿಚಾರಗಳು ಅವರು ಯಾವ ಮಟ್ಟದವರೇ ಆಗಿರಲಿ, ಎಂತಹ ಸ್ಥಾನಮಾನದವರೇ ಇರಲಿ, ಅವರ ಸಂಸ್ಕೃತಿಯ ಹಿನ್ನೆಲೆಯ ಸೂತ್ರ ಒಂದೇ ಆಗಿರುತ್ತದೆ. ಒಂದು ಸಂಗೀತ ಕಛೇರಿಯಲ್ಲಿ ತಂಬೂರಿ, ಮೃದಂಗ, ಪಿಟೀಲು, ವೀಣೆ, ಕೊಳಲು ಮೊದಲಾದ ಭಿನ್ನ ಭಿನ್ನ ವಾದನಗಳಿರುವುದುಂಟು. ಅಲ್ಲಿ ಸಂಗೀತವನ್ನು ಹಾಡತಕ್ಕವರು ಭಿನ್ನ ಭಿನ್ನರು; ಸಂಗೀತ ವಾದ್ಯಗಳು ಭಿನ್ನ ಭಿನ್ನ. ಆದರೂ ಅಲ್ಲಿ ನಾವು ಕೇಳುವುದು ಗಾಯನದ ಮಾಧುರ್ಯವೊಂದನ್ನು ಮಾತ್ರ. ಹೀಗೆಯೇ ನಮ್ಮ ಭಿನ್ನ ಭಿನ್ನ ಜನಾಂಗಗಳಲ್ಲಿ ಸಮನ್ವಯದ ಮಾಧುರ್ಯ ಕಂಡುಬರುತ್ತದೆ.

ಒಂದು ಸಮಾಜವು ಚೆನ್ನಾಗಿ ಕಳೆಗೊಳ್ಳಬೇಕಾದರೆ ಆ ಸಮಾಜದಲ್ಲಿ ಸಂಗೀತ, ಸಾಹಿತ್ಯ, ಚಿತ್ರ, ಶಿಲ್ಪ, ನೃತ್ಯ ಕುಶಲಕಲೆ ಮೊದಲಾದವುಗಳಿಗೆ ಹೆಚ್ಚಿನ ಪ್ರೋತ್ಸಾಹ ಲಭಿಸಬೇಕು. ಪ್ರಾಚೀನ ಭಾರತದಲ್ಲಿ ರಾಜಮಹಾರಾಜರು ಈ ಬಗೆಯ ಪ್ರೋತ್ಸಾಹ ನೀಡುತ್ತಿದ್ದರು ಸಂಸ್ಕೃತಿಯ ರಾಯಭಾರಿಗಳೆನಿಸಿದ ಈ ಕಲಾಪ್ರವೀಣರಿಗೆ ಇಂದು ನಮ್ಮ ಸಮಾಜ, ಸರಕಾರಗಳಿಂದ ಹೆಚ್ಚಿನ ಮಾನ ಮನ್ನಣೆ, ಪ್ರೋತ್ಸಾಹ ದೊರೆಯಬೇಕು. ಆಗ ನಮ್ಮ ಸಮಾಜ ಜೀವನ ಉನ್ನತವಾಗುತ್ತದೆ. ಜನಜೀವನದಲ್ಲಿ ನವಚೈತನ್ಯವುಂಟಾಗುತ್ತದೆ. ಸಮಾಜವು ಸುಖಸಂತೋಷಗಳಿಂದ ನಲಿದಾಡುತ್ತದೆ.

## 7.2.1 ಪಠ್ಯದಲ್ಲಿಯ ಕಠಿಣ ಶಬ್ದಗಳು

| | |
|---|---|
| ಅತಿಥಿ ದೇವೋಭವ | — ಅತಿಥಿಗಳನ್ನು ದೇವರೆಂದು ತಿಳಿ |
| ಅತಿವ್ಯಾಪಕ | — ಬಹಳ ವಿಸ್ತಾರ |
| ಅಂತರಂಗ | — ಮನಸ್ಸು ಹೃದಯ |
| ಅರ್ಥೈಸು | — ಅರ್ಥಮಾಡು |
| ಅನಾಗರಿಕ | — ಕಾಡುಮನುಷ್ಯ ಸುಧಾರಿಸದವ |
| ಅನಿವಾರ್ಯ | — ಬಿಡಲಿಕ್ಕೆ ಬಾರದಂತಹ |
| ಅನುಕಂಪೆ | — ದಯೆ |
| ಅನುಗ್ರಹಿಸು | — ಕೃಪೆ ಮಾಡು |
| ಅಭಿವ್ಯಕ್ತವಾಗು | — ತೋರು |
| ಅವಿನಾಭಾವ | — ಒಂದನ್ನು ಬಿಟ್ಟು ಇನ್ನೊಂದು ಇಲ್ಲದಿರುವುದು, ಅನ್ಯೋನ್ಯ |
| ಅಸಭ್ಯ | — ಸಭ್ಯತೆಯಿಲ್ಲದವ |
| ಅಸಂಸ್ಕೃತ | — ಸಂಸ್ಕಾರವಿಲ್ಲದವ |
| ಆಚಾರ್ಯದೇವೋಭವ | — ಗುರುಗಳನ್ನು ದೇವರೆಂದು ತಿಳಿ. |
| ಆತ್ಮಶಕ್ತಿ | — ತನ್ನನ್ನು ತಾನು ಉದ್ಧರಿಸಿಕೊಳ್ಳುವ, ಸದ್ಗತಿಯನ್ನು ಪಡೆದುಕೊಳ್ಳುವ ಶಕ್ತಿ. |

ಆಶ್ರಯ — ಆಸರೆ, ಸಹಾಯ
ಇಂಗಿತಜ್ಞತೆ — ಒಬ್ಬರ ಮನಸ್ಸನ್ನು ತಿಳಿದುಕೊಳ್ಳುವಿಕೆ
ಇದಿರು — ತನ್ನಬಿಟ್ಟು ಮಿಕ್ಕದ್ದು
ಉಗ್ಗಡಿಸು — ಘೋಷಿಸು, ಸಾರು
ಕರ್ತವ್ಯದಕ್ಷತೆ — ಮಾಡತಕ್ಕ ಕೆಲಸದಲ್ಲಿ ತೋರುವ ಜಾಣ್ಮೆ
ಕರಕಷ್ಟ — ಬಹಳ ಕೀಳು
ಕಳೆಗೊಳ್ಳು — ಲಕ್ಷಣವಾಗಿ ಕಾಣು
ಕಂಗೊಳಿಸು — ಶೋಭಿಸು
ಕಂಬಿ — ಹಳಿ
ಕಂಟಕ — ಮುಳ್ಳು, ಅಡೆತಡೆ, ಘಾತುಕ
ಕೃತಜ್ಞತೆ — ಉಪಕಾರ ಸ್ಮರಣೆ
ಕಾರ್ಯಶ್ರದ್ಧೆ — ಕರ್ತವ್ಯದಲ್ಲಿ ನಂಬಿಕೆ, ವಿಶ್ವಾಸ
ಗಗನ ಚುಂಬಿತ — ಆಕಾಶವನ್ನು ಮುದ್ದಿಸುವ, ಮುಟ್ಟುವ
ಗುಣಗ್ರಾಹಕತೆ — ಗುಣಗಳನ್ನು ಮೆಚ್ಚುವುದು
ಚೈತನ್ಯ — ಪ್ರಾಣ
ತೃಷೆ — ನೀರಡಿಕೆ
ತುತ್ತಾಗು — ಗುರಿಯಾಗು
ಧರ್ಮಂಚರ — ಧರ್ಮವನ್ನು ಮಾಡು
ದೇವಮಾನವರು — ದೇವತ್ವವನ್ನು ಪಡೆದ ದೈವಗುಣಗಳುಳ್ಳ ಮಾನವರು
ನಿಕಟ — ಅತ್ಯಂತ ಸಮೀಪ
ನಿಗೂಢ — ರಹಸ್ಯ ಗುಪ್ತ, ಹೊರಗೆ ತರಲಸಾಧ್ಯವಾಗುವಂತೆ, ಮುಚ್ಚಿಟ್ಟದ್ದು
ಪದ್ಧತಿ — ರೂಢಿ
ಪ್ರಗತಿ — ಏಳ್ಗೆ, ಮುನ್ನಡೆ
ಪ್ರತಿಭಾ — ಹೊಸ ಹೊಸ ಭಾವನೆ, ಕಲ್ಪನೆಗಳನ್ನು ಹುಟ್ಟಿಸುವ ಶಕ್ತಿ, ಪ್ರಜ್ಞೆ
ಪಾಮರ — ಗ್ರಾಮೀಣ, ಓದು ಬರಹ ಬಾರದ ಗಾಂಪ, ಮೂಢ
ಪ್ರಾಪ್ತವಾಗು — ದೊರೆ
ಪಿತೃ — ತಂದೆ
ಪಿತೃದೇವೋಭವ — ತಂದೆ ದೇವರೆಂದು ತಿಳಿ
ಪ್ರೋತ್ಸಾಹ — ಸಹಾಯ
ಬಹಿರಂಗ — ದೇಹದ ಹೊರಭಾಗ
ಬಳೆಸು — ಬೆಳೆಸು, ಹೆಚ್ಚಿಗೆ ಮಾಡು, ವರ್ಧಿಸು
ಬುದ್ಧಿಶಕ್ತಿ — ವಿಚಾರ ಮಾಡುವ ಶಕ್ತಿ
ಮಧುರತಮ — ಅತ್ಯಂತ ಮಧುರ, ಸಿಹಿ
ಮಹದ್ಗುಣ — ದೊಡ್ಡ ಗುಣ
ಮಂತ್ರ — ಮನನ ಮಾಡುವುದರಿಂದ ನಮ್ಮನ್ನು ಉದ್ಧರಿಸುವ ಶಬ್ದ ಸಮೂಹ
ಮಾತೃದೇವೋಭವ — ತಾಯಿಯನ್ನು ದೇವರೆಂದು ತಿಳಿ
ಮಿಥ್ಯೆ — ಹುಸಿ, ಸುಳ್ಳು
ಮೊಲಸಿಂದ — ಮೊಲಕ್ಕಿಂತ
ಮೇಡು — ದಿನ್ನೆ, ಎತ್ತರದ ಪ್ರದೇಶ
ಮೌಲ್ಯತೆ — ಬೆಲೆ
ರಸಿಕತೆ — ಸೌಂದರ್ಯವನ್ನು ಅನುಭವಿಸಿ ಆನಂದ ಪಡುವ ಶಕ್ತಿ
ಲಲನೆ — ಸ್ತ್ರೀ
ವಂಚಿತ — ತ್ಯಕ್ತ
ವಿಚಾರಪರತೆ — ವಿಚಾರಶೀಲನಾಗಿರುವುದು
ವೇದನೆ — ತಿಳಿವಳಿಕೆ, ಜ್ಞಾನ, ಅರಿವು
ವೈದುಷ್ಯ — ಪಾಂಡಿತ್ಯ
ವೈಶಾಲ್ಯ — ವಿಸ್ತಾರ
ವ್ಯತಿರಿಕ್ತ — ವಿರುದ್ಧ
ಶುಚಿತ್ವ — ಮಾಲಿನ್ಯರಹಿತವಾಗಿರುವುದು
ಸತ್ಯಂವದ — ಸತ್ಯವನ್ನು ನುಡಿ
ಸಹೃದಯ — ಸಮಾನ ಹೃದಯವುಳ್ಳವ

ಸಾರಸರ್ವಸ್ವ — ಶ್ರೇಷ್ಠತೆ
ಹಿತಾಕಾಂಕ್ಷಿ — ಹಿತವನ್ನು ಬಯಸುವವ

### 7.2.2 ಪಠ್ಯದಲ್ಲಿಯ ಮುಖ್ಯ ವಿಚಾರ

ಮಾನವ ಜನಾಂಗದ ಸಾವಿರಾರು ವರ್ಷಗಳ ಬದುಕಿನ ಅನುಭವ ಆಲೋಚನೆಗಳ ಫಲವಾಗಿ ಬಂದ ನಂಬಿಕೆ ನಡೆವಳಿಕೆಗಳನ್ನು ಸಂಸ್ಕೃತಿಯ ಮೂಲವೆಂದು ತಿಳಿಯಬಹುದು. 'ಸಂಸ್ಕೃತಿ' ಎಂಬುದು ಮಾತಿಗೆ ನಿಲುಕದೆ, ಶಬ್ದಕ್ಕೆ ನಿಲುಕದೆ ಜನರ ಆಚರಣೆಯ ರೀತಿ ನೀತಿಗಳಿಂದ ಗೋಚರವಾಗುವ ವಿಷಯ. ಈ ಸಂಸ್ಕೃತಿಯು ವ್ಯಕ್ತಿಗಾಗಲಿ, ಸಮಾಜಕ್ಕಾಗಲಿ ಒಂದೇ ದಿನ ಒಟ್ಟುಗೂಡಿ ಬರತಕ್ಕದಲ್ಲ. ಸಮಾಜ ಜೀವನಕ್ಕೆ ಸಂಸ್ಕೃತಿಯು ಸ್ಫೂರ್ತಿಯನ್ನು ಕೊಡತಕ್ಕದು. ಆದುದರಿಂದ ಸಂಸ್ಕೃತಿಯ ಬಲವಿಲ್ಲದ ವ್ಯಕ್ತಿ, ಕುಟುಂಬ ಮತ್ತು ಸಮಾಜ ಇವು ವಾಸನೆಯಿಲ್ಲದ ಹೂವು,ಮಾಧುರ್ಯವಿಲ್ಲದ ಗಾನ, ರುಚಿಕಟ್ಟಿಲ್ಲದ ಊಟ, ಮಂಗಳವಾದ್ಯಗಳಿಲ್ಲದ ಮದುವೆ, ಲಾವಣ್ಯವಿಲ್ಲದ ಲಲನೆ — ಇವುಗಳ ಹಾಗೆ ವ್ಯರ್ಥವಾದುವು. ಹೂವು ಮತ್ತು ವಾಸನೆ, ತಂಪು, ಮಂದಮಾರುತ ಮತ್ತು ಆನಂದ — ಇವು ಹೇಗೆ ಪರಸ್ಪರ ಅವಿನಾಭಾವ ಸಂಬಂಧದಿಂದ ಕೂಡಿವೆಯೋ ಹಾಗೆ ಸಂಸ್ಕೃತಿ ಮತ್ತು ಸಮಾಜ ಜೀವನ ಇವು ನಿಕಟವಾದ ಸಂಬಂಧವನ್ನು ಪಡೆದಿವೆ.

ವಿಶ್ವದ ಸೃಷ್ಟಿಯಲ್ಲಿ ಪ್ರಾಣಿವರ್ಗಕ್ಕಿಂತ ಮನುಷ್ಯ ಕುಲವು ಕೆಲವು ಶ್ರೇಷ್ಠವಾದ ಗುಣಗಳಿಂದ ಕೂಡಿದೆ. ಇತರ ಪ್ರಾಣಿಗಳಿಗಿಲ್ಲದಿರುವ ಆಲೋಚನಾ ಶಕ್ತಿ ವಾಕ್‌ಶಕ್ತಿ ಮುಂತಾದುವನ್ನು ಮನುಷ್ಯರು ಪಡೆದಿದ್ದಾರೆ.

ಯೋಗ್ಯನಾದ ಮನುಷ್ಯನು ತಾನು ಸುಖವಾಗಿಯೂ ಸಂತೋಷಮಯವಾಗಿಯೂ ಬದುಕುವುದಕ್ಕೆ ಪ್ರಯತ್ನಿಸುವುದಲ್ಲದೆ ತನ್ನ ನೆರೆಹೊರೆ, ಸಮಾಜ ಮತ್ತು ದೇಶಬಾಂಧವರು ಕೂಡ ಸುಖಸಂತೋಷಗಳಿಂದ ಬದುಕಿಬಾಳಲು ಪ್ರಯತ್ನಿಸುತ್ತಾನೆ. ಆದುದರಿಂದ ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶ ಇವು ಪರಸ್ಪರ ಸಂಬಂಧವುಳ್ಳವುಗಳು. ಈ ಸಂಬಂಧಗಳು ಗಂಗಾ ಪ್ರವಾಹದಂತೆ ಮುಂದುವರಿದುಕೊಂಡು ಬರುವಂತೆ ಮಾಡುವುದೇ ನಮ್ಮ ಸಂಸ್ಕೃತಿಯ ಪ್ರಭಾವ; ಇದು ಮಂತ್ರ ಶಕ್ತಿ.

ಸಂಸ್ಕೃತಿ ಎಂಬ ಶಬ್ದವು ಧರ್ಮ, ದೇವರು ಸತ್ಯ ಮೋಕ್ಷ ಇತ್ಯಾದಿ ಶಬ್ದಗಳ ಹಾಗೆ ವಿಶಾಲವೂ ನಿಗೂಢವೂ ಆದ ಅರ್ಥವುಳ್ಳದು; ಬಹು-ಮುಖವಾದುದು. ವಿಶಾಲಾರ್ಥವುಳ್ಳದು. ಒಟ್ಟಿನಲ್ಲಿ ಸಭ್ಯತೆ, ನಾಗರಿಕತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ, ಇಂಗಿತಜ್ಞತೆ, ಕರ್ತವ್ಯ ದಕ್ಷತೆ, ಸತ್ಯಶೀಲತೆ, ಗುರುದೇವತಾ ಭಕ್ತಿ ದೇಶಭಾಷಾಭಿಮಾನ, ತ್ಯಾಗ ಗುಣ, ಶುಚಿತ್ವ, ಸ್ನೇಹ ಪರತೆ ಇತ್ಯಾದಿ ಸದ್ಗುಣ ಸಂಪತ್ತಿನ ಸಾರಸರ್ವಸ್ವವೇ ಸಂಸ್ಕೃತಿ.

ಮನುಷ್ಯನು ಸಮಾಜ ಜೀವಿ. ಮಾನವನು ಹುಟ್ಟುವಾಗ, ಸಾಯುವಾಗ, ರೋಗರುಜಿನಗಳಿಗೆ ತುತ್ತಾದಾಗ ಇನ್ನೊಬ್ಬರ ಆಶ್ರಯವಿಲ್ಲದೆ ಬದುಕುವುದು ಕಷ್ಟ. ಆದುದರಿಂದಲೇ ಮಾನವನು ಸಮಾಜ ಜೀವಿ ಎಂದು ಹೇಳುವುದು. ಈ ಕಾರಣದ ದೆಸೆಯಿಂದ ವ್ಯಕ್ತಿ ಮತ್ತು ಸಮಾಜಗಳ ಸುಖಸಂತೋಷಗಳು ಆಗುಹೋಗುಗಳು, ಹಿತಾಹಿತಗಳು, ಪ್ರಯೋಜನ ಪ್ರಗತಿಗಳು ಪರಸ್ಪರ ಸಂಬಂಧವುಳ್ಳವುಗಳೆಂದು ಸಿದ್ಧವಾಗುತ್ತದೆ. ವ್ಯಕ್ತಿ ಸಮಾಜಗಳೆರಡೂ ಅಪಾಯಕ್ಕೆ ಈಡಾಗದ ಹಾಗೆ ಸಮಾಜ ಜೀವನವು ಸುಗಮವಾಗಿ, ಸುಖವಾಗಿ ನಡೆಯುವಂತೆ ಮಾಡುವ ಹಿನ್ನೆಲೆಯ ಶಕ್ತಿಯೇ ಸಂಸ್ಕೃತಿ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ. ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ; ಇದೇ ಬಹಿರಂಗ ಶುದ್ಧಿ ಎಂಬ ಉಪದೇಶವು ಸಮಾಜ ಜೀವನವು ಸುಗಮವಾಗಿ ನಡೆಯಲು ಸಾಧಾರವಾಗಿದೆ. ಇದು ಸಂಸ್ಕೃತಿಯ ಸಾರಸರ್ವಸ್ವವನ್ನೊಳಗೊಂಡಿದೆ.

ಗೋವಿನ ಕಥೆಯಲ್ಲಿ ಸತ್ಯದ ಹಿರಿಮೆ ಕಂಡುಬರುತ್ತದೆ. ಹುಲಿಯ ಬಾಯಿಗೆ ತುತ್ತಾಗಲು ಸಿದ್ಧವಾಗಿದ್ದ ಒಂದು ಗೋವು "ಸತ್ಯವೆಂಬುದೆ ತಾಯಿ ತಂದೆ! ಸತ್ಯವೆಂಬುದೆ ಬಂಧು ಬಳಗವು!! ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು" ಎಂಬ ಸತ್ಯ ಸಂದೇಶವನ್ನು ತನ್ನ ಕರುವಿಗೆ ಕೊಟ್ಟು ಹೋಗುತ್ತದೆ. ಈ ಗೋವಿನ ಕಥೆಯು ಸತ್ಯವು ಕೇವಲ ಮಾನವ ಕುಲಕ್ಕಷ್ಟೇ ಅಲ್ಲ, ಪ್ರಾಣಿಲೋಕಕ್ಕೂ ಅತ್ಯಂತ ಘನವಾದ ತತ್ವವನ್ನು ಬೋಧಿಸುತ್ತದೆ.

ಸಮಾಜ ಜೀವನವು ಪರಿಶುದ್ಧವಾಗಬೇಕಾದರೆ ಸತ್ಯದ ಜತೆಯಲ್ಲಿಯೇ ಅಹಿಂಸೆ, ಕಾರ್ಯಶ್ರದ್ಧೆ, ಸ್ನೇಹಪರತೆ, ಅನುಕಂಪ, ಪರಮತ ಸಹಿಷ್ಣುತೆ, ಸಹೃದಯಭಾವ, ಪರೋಪಕಾರ ಬುದ್ಧಿ ಮೊದಲಾದ ಸದ್ಗುಣಗಳು ಜನಜೀವನದಲ್ಲಿ ಅಳವಡುವುದು ಅತ್ಯಗತ್ಯ

ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ, ಅತಿಥಿದೇವೋಭವ ಎಂಬ ಉಕ್ತಿಗಳು ಈ ಸಂಸ್ಕೃತಿಯನ್ನು ಉಗ್ಗಡಿಸುತ್ತವೆ. ಸತ್ಯಂವದ, ಧರ್ಮಂ ಚರ; ಪರೋಪಕಾರ: ಪುಣ್ಯಾಯ; ಪಾಪಾಯ ಪರಪೀಡನಂ - ಇತರರಿಗೆ ಉಪಕಾರ ಮಾಡುವುದು ಪುಣ್ಯ; ಇತರರನ್ನು ಹಿಂಸಿಸುವುದು ಪಾಪ- ಇಂತಹ ಉನ್ನತೋನ್ನತ ಸಂದೇಶವನ್ನು ಕವಿಗಳೂ ದಾರ್ಶನಿಕರೂ ಸಾರುತ್ತ ಬಂದಿದ್ದಾರೆ.

ವೀರಗಲ್ಲುಗಳು ಪರಾಕ್ರಮಕ್ಕೆ, ಶಿಲಾಶಾಸನ, ತಾಮ್ರಶಾಸನಗಳು ದಾನಗುಣಕ್ಕೆ, ಮಹಾಸತಿ ಕಲ್ಲುಗಳು ಪಾತಿವ್ರತ್ಯಕ್ಕೆ ನಿಷಧಿಕಲ್ಲುಗಳು ಅಹಿಂಸಾ ತತ್ವಕ್ಕೆ ಸ್ಪಷ್ಟವಾದ ಸಂಕೇತಗಳಾಗಿವೆ. ಇವೆಲ್ಲ ನಮ್ಮ ಸಂಸ್ಕೃತಿ ಜೀವಂತವಾದುದು, ಬಲಶಾಲಿಯಾದುದು ಎಂಬುದನ್ನು ಜಗತ್ತಿಗೆ ತೋರಿಸಿಕೊಡಲು ಸಹಾಯಕವಾಗಿವೆ.

# ಅಭ್ಯಾಸ - 1

1. ಸಂಸ್ಕೃತಿ ಎಂದರೇನು?

..................................................................................................................

..................................................................................................................

..................................................................................................................

2. ಸಂಸ್ಕೃತಿಯನ್ನು ಕುರಿತು ಪ್ರಪಂಚದ ಕೆಲವು ವಿದ್ವಾಂಸರು ಹೇಳಿದ ವ್ಯಾಖ್ಯೆಗಳಲ್ಲಿ ಕಂಡುಬರುವ ಸಾಮಾನ್ಯ ಅಂಶಗಳಾವುವು?

..................................................................................................................

..................................................................................................................

..................................................................................................................

3. ಜನತೆಯ ನಂಬಿಕೆ, ನಡವಳಿಕೆ, ಆಚಾರ, ವಿಚಾರ, ಪದ್ಧತಿಗಳನ್ನೇ ನೇರವಾಗಿ ಸಂಸ್ಕೃತಿಯೆಂದು ಕರೆಯಬಹುದೆ?

..................................................................................................................

..................................................................................................................

..................................................................................................................

..................................................................................................................

4. ಸಂಸ್ಕೃತಿಯ ಸಾರವೆನಿಸಿದ ಕೆಲವು ಸದ್ಗುಣಗಳಾವುವು?

..................................................................................................................

..................................................................................................................

..................................................................................................................

5. ವ್ಯಕ್ತಿ ಅಥವಾ ಸಮಾಜ ಒಂದು ದಿನದಲ್ಲಿ ತನ್ನ ಸಂಸ್ಕೃತಿಯನ್ನು ಮಾರ್ಪಡಿಸಿಕೊಳ್ಳಬಲ್ಲುದೆ?

..................................................................................................................

..................................................................................................................

..................................................................................................................

# ಅಭ್ಯಾಸ - 2

(1) ಕರ್ನಾಟಕ ಸಂಸ್ಕೃತಿಯನ್ನು ಕುರಿತು ಬರೆಯಿರಿ.

..................................................................................................................

..................................................................................................................

..................................................................................................................

..................................................................................................................

2. **ಬಿಟ್ಟ ಸ್ಥಳ ತುಂಬಿರಿ.**

ಅ) ಸಾವಿರಾರು ವರ್ಷಗಳ ...........................ತಿಳಿವಳಿಕೆಗಳ ಫಲವಾಗಿ ಸಮಾಜಕ್ಕೆ ಕೂಡಿ ಬರುವ ...................... ನಾವು ಸಂಸ್ಕೃತಿ ಎಂದು ಕರೆಯಬಹುದು.

ಆ) ದೇಹಸೌಂದರ್ಯ, ಶರೀರಬಲ ಮತ್ತು ವ್ಯಾವಹಾರಿಕ ..........................ಗಳಲ್ಲಿ ಪ್ರಾಣಿಗಳು ಮನುಷ್ಯನಿಗಿಂತ ಮಿಗಿಲಾಗಿವೆ.

(ಇ) ನಾವು ವಾಸ ಮಾಡುವ ಮನೆ, .................. ಪುಸ್ತಕ.................. ವಸ್ತ್ರಾಭರಣಗಳು ನಮಗೆ ನಮ್ಮ ನಾಡಿನ ಜನತೆಯಿಂದ ಪ್ರಾಪ್ತವಾಗಿವೆ.

ಈ) ಅ. ರಸಿಕನ ಭಾವ ..................................
ಆ. ವಿಚಾರಪರನಾಗಿರುವ ಭಾವ ............................
ಇ. ಇಂಗಿತವನ್ನು ತಿಳಿದುಕೊಳ್ಳುವ ಭಾವ ......................
ಈ. ಸ್ನೇಹಪರವಾಗಿರುವ ಭಾವ ..................................
ಉ. ಅನೇಕ ಹಿಂಡುಗಳಾಗಿ ...................................
ಊ. ........................ + .................. ಕೈಗೂಸು.

## 7.3 ವ್ಯಾಕರಣ ವಿಶೇಷಗಳು

1. ಒಂದು ಅಭಿಪ್ರಾಯವನ್ನು ಪೂರ್ತಿಯಾಗಿ ಹೇಳುವ ಪದಗಳ ಗುಂಪನ್ನು ವಾಕ್ಯವೆಂದು ಕರೆಯುವರು. ದೇವರು ಎಲ್ಲ ಕಡೆ ಇರುವನು, ಅವನು ಶಾಲೆಗೆ ಹೋದನು ಮುಂತಾದವು ವಾಕ್ಯಗಳು. ಸಾಮಾನ್ಯವಾಗಿ ಒಂದು ವಾಕ್ಯದಲ್ಲಿ ಕರ್ತೃಪದ ಹಾಗೂ ಕ್ರಿಯಾ ಪದಗಳಿರುವುದುಂಟು. ಮೇಲಿನ ವಾಕ್ಯಗಳಲ್ಲಿ ದೇವರು, ಅವನು ಕರ್ತೃ ಪದಗಳು ; ಇರುವನು, ಹೋದನು ಇವು ಕ್ರಿಯಾ ಪದಗಳು. ಇದು ಸಾಮಾನ್ಯ ನಿಯಮ. ಆದರೆ ಕನ್ನಡದಲ್ಲಿ ಕ್ರಿಯಾಪದಗಳಿಲ್ಲದೆ ವಾಕ್ಯರಚನೆಯಾಗಬಲ್ಲುದು.

ಉದಾಹರಣೆಗೆ : ಇದೇ ಅಂತರಂಗಶುದ್ಧಿ.
ಇದೇ ಬಹಿರಂಗ ಶುದ್ಧಿ.
ಹರನೆಂಬುದೇ ಸತ್ಯ
ಸತ್ಯವೆಂಬುದೆ ತಾಯಿ ತಂದೆ.
ಸತ್ಯವೆಂಬುದೆ ಬಂಧುಬಳಗ.

2. ಕ್ರಿಯಾಪದವು ಕರ್ತೃಪದದ ಲಿಂಗ ವಚನಗಳನ್ನು ಅನುಸರಿಸುತ್ತದೆ. ಆಕೆ ಮನೆಗೆ ಹೋದಳು - ಎಂಬ ವಾಕ್ಯದಲ್ಲಿ ಹೋದಳು ಎಂಬ ಕ್ರಿಯಾಪದವು ಆಕೆ ಎಂಬ ಕರ್ತೃ ಪದವನ್ನು ಅನುಸರಿಸಿ ಸ್ತ್ರೀಲಿಂಗ ಏಕವಚನದಲ್ಲಿದೆ. 'ಅಳು' ಎಂಬುದು ಅಲ್ಲಿ ಸ್ತ್ರೀಲಿಂಗವನ್ನು ಸೂಚಿಸುತ್ತದೆ. ಆಳ್ ಎಂಬ ಆಖ್ಯಾತ ಪ್ರತ್ಯಯ ವರ್ತಮಾನ ಕಾಲದಲ್ಲಿ ಸ್ತ್ರೀಲಿಂಗ ದ್ಯೋತಕವಾಗಿದೆ. ಉದಾಹರಣೆಗೆ : ಆಕೆ ಮನೆಗೆ ಹೋಗುತ್ತಾಳೆ.

ಕರ್ತೃಪದದ ಸ್ಥಾನದಲ್ಲಿ ಒಂದೇ ಪದವಿರದೆ ಭಿನ್ನ ಭಿನ್ನ ವಚನ, ಲಿಂಗಗಳ ಬೇರೆ ಬೇರೆ ಪದಗಳಿದ್ದರೆ ಕ್ರಿಯಾಪದವು ಬಹುವಚನದಲ್ಲಿರುವುದಂತೂ ಸರಿಯೆ. ಆದರೆ ಅದು ಯಾವ ಲಿಂಗವನ್ನು ಅನುಸರಿಸುತ್ತದೆ ಎಂಬುದು ಆ ಕರ್ತೃ ಸ್ಥಾನದಲ್ಲಿರುವ ಪದಗಳಲ್ಲಿ ಕೊನೆಯದಾಗಿ ಬರುವ ಪದವನ್ನು ಅವಲಂಬಿಸುತ್ತದೆ. ಉದಾಹರಣೆಗೆ : ಆ ಜಾತ್ರೆಯಲ್ಲಿ ಜನರೂ ದನಗಳೂ ವಿಪುಲವಾಗಿ ಕಂಡು ಬಂದವು. ಎಂಬಲ್ಲಿ ಕಂಡು ಬಂದವು ಎಂಬ ಕ್ರಿಯಾಪದ ದನಗಳ ಲಿಂಗವನ್ನು ಆಧರಿಸಿದೆ. ಜನರು ಕಂಡು ಬಂದವು ಎಂದು ನಾವು ಅನ್ನುವುದಿಲ್ಲ. ಆದರೆ ದನ ಕಂಡುಬಂದವು ಎಂದು ಹೇಳುತ್ತೇವೆ. ಇದನ್ನು ನಾವು ಗಮನಿಸಬೇಕು.

ಈ ಪಠ್ಯಭಾಗದಲ್ಲಿ ಬಂದಿರುವ ಕೆಳಗಿನ ವಾಕ್ಯವನ್ನು ಪರಿಶೀಲಿಸಬಹುದು. ಇಲ್ಲಿ ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶ ಇವು ಪ್ರತಿಯೊಂದೂ ಏಕವಚನದಲ್ಲಿದ್ದರೂ ಇವು ನಾಲ್ಕನ್ನೂ ವ್ಯಾಪಿಸುವ ಕ್ರಿಯಾಪದ ಬಹುವಚನದಲ್ಲಿರುವುದು ಸ್ವಾಭಾವಿಕ. ಆದರೆ ಈ ಮೂರರಲ್ಲಿ ಕೊನೆಗೆ ಬಂದ 'ಸಮಾಜ' ಪದದ ಲಿಂಗವನ್ನು ಆಶ್ರಯಿಸುತ್ತದೆ. ''ಆದುದರಿಂದ ವ್ಯಕ್ತಿ ಕುಟುಂಬ ಸಮಾಜ ಮತ್ತು ದೇಶ ಇವು ಪರಸ್ಪರ ಸಂಬಂಧವುಳ್ಳವುಗಳು''.

3. ಕನ್ನಡದಲ್ಲಿ ತರತಮ ಭಾವ ವ್ಯಕ್ತ ಮಾಡುವ ರೀತಿ : ದೇಹ ಸೌಂದರ್ಯ, ಶರೀರ ಬಲ ಮತ್ತು ವ್ಯಾವಹಾರಿಕ ಮೌಲ್ಯತೆಗಳಲ್ಲಿ ಪ್ರಾಣಿಗಳು ಮನುಷ್ಯರಿಗಿಂತ ಮಿಗಿಲಾಗಿವೆ. ಇಲ್ಲಿ ಪ್ರಾಣಿ ವರ್ಗಮಾನವ ವರ್ಗಗಳೆರಡರ ನಡುವೆ ತುಲನೆಯಿದೆ.

ಪಂಚಮೀ ವಿಭಕ್ತಿ ಪ್ರತ್ಯಯವೇ ಹಳಗನ್ನಡದಲ್ಲಿ ತುಲನಾತ್ಮಕ ಪ್ರತ್ಯಯವಾಗಿತ್ತು. ಉದಾಹರಣೆಗೆ : 'ಮೊಲನಿಂದ ಕರಕಷ್ಟ ನರನ ಬಾಳುವೆ' ಎಂಬಲ್ಲಿ ಮೊಲನಿಂದ (ಮೊಲಕ್ಕಿಂತ) ಎಂಬಲ್ಲಿಯ 'ಇಂದ' ಎಂಬ ಪಂಚಮೀ ವಿಭಕ್ತಿ ಪ್ರತ್ಯಯವನ್ನು ನೋಡಬೇಕು. ಆದರೆ ಹೊಸಗನ್ನಡದಲ್ಲಿ ಈ ಪ್ರತ್ಯಯ **ಇಂತ** ಎಂದಾಗಿದೆ. **ಅವನಿಗಿಂತ** ಎಂಬಲ್ಲಿ **ಅವನು** ಎಂಬ ಸರ್ವನಾಮಕ್ಕೆ ಮೊದಲು ಚತುರ್ಥ ವಿಭಕ್ತಿಯ (ಇ)ಗೆ ಪ್ರತ್ಯಯ ಸೇರಿ ಆಮೇಲೆ ಇಂತ ಪ್ರತ್ಯಯ ಅದಕ್ಕೆ ಸೇರಿದೆ. ಪಂಚಮೀ ವಿಭಕ್ತಿಯಾಗಿ ಇಂದ ಪ್ರತ್ಯಯವೂ ಹೊಸಗನ್ನಡದಲ್ಲಿ ಇರುವುದರಿಂದ ಇವೆರಡನ್ನೂ ಬೇರೆ ಬೇರೆ ಪ್ರತ್ಯಯಗಳೆಂದೇ ಗುರುತಿಸಬೇಕಾಗುತ್ತದೆ.

ಆದರೆ ಮಾನವರು ಆತ್ಮಶಕ್ತಿ, ಬುದ್ಧಿಶಕ್ತಿ, ಪ್ರತಿಭಾಶಕ್ತಿ ಮೊದಲಾದ ಮಹದ್ಗುಣಗಳಿಂದ ಸಕಲ ಪ್ರಾಣಿಗಳಿಗಿಂತಲೂ ಶ್ರೇಷ್ಠರಾಗಿದ್ದಾರೆ. ಎಲ್ಲ ಪ್ರಾಣಿಗಳಿಗಿಂತ ಎಂಬಲ್ಲಿ ಸರ್ವಶ್ರೇಷ್ಠ ಎಂಬ ಭಾವವಿದೆ ಎಂಬುದನ್ನು ಗಮನಿಸಿರಿ. ಇದು ಒಂದು ರೀತಿಯ ತಮ ಅರ್ಥ ಕೊಡುವ ವಾಕ್ಯ. ಆದರೆ ಇದನ್ನು ತರ ಅರ್ಥದ ಪ್ರತ್ಯಯದಿಂದಲೇ ಸಾಧಿಸಲಾಗಿದೆ.

**4.** ಹಲವು ಪದಗಳು ಒಂದೇ ವಿಭಕ್ತಿಯ ಕೆಳಗೆ ಬರುತ್ತಿದ್ದರೆ ಆ ವಿಭಕ್ತಿ ಪ್ರತ್ಯಯ ಆ ಕಾರಕಗಳಿಗೆ ಬಿಡಿಬಿಡಿಯಾಗಿ ಹತ್ತಬಹುದು ಇಲ್ಲವೆ ಮಿಕ್ಕ ಪದಗಳೆಲ್ಲ ಪ್ರಥಮಾ ವಿಭಕ್ತಿಯಲ್ಲಿದ್ದು ಕೊನೆಯ ಪದಕ್ಕೆ (ಬಹು)ವಚನ ಹಾಗೂ ಆ ವಿಭಕ್ತಿ ಪ್ರತ್ಯಯಗಳು ಹತ್ತುತ್ತವೆ.

ಉದಾಹರಣೆಗೆ : ವ್ಯಕ್ತಿಗಳ, ಕುಲಗಳ, ಗುಂಪುಗಳ, ಪದ್ಧತಿಗಳ, ಆಚಾರಗಳ, ನಂಬಿಕೆಗಳ ಸಂಸ್ಕೃತಿ. ಇದನ್ನು ಹೀಗೂ ಹೇಳಬಹುದು :— ವ್ಯಕ್ತಿ, ಕುಲ, ಗುಂಪುಗಳ ಪದ್ಧತಿ, ಆಚಾರ, ನಂಬಿಕೆಗಳ ಸಂಸ್ಕೃತಿ.

ಮೇಲೆ ತೋರಿಸಿದಂತೆ, ದೇಹ ಸೌಂದರ್ಯ, ಶರೀರ ಬಲ ಮತ್ತು ವ್ಯಾವಹಾರಿಕ ಮೌಲ್ಯಗಳಲ್ಲಿ ಇಲ್ಲಿ ಶಬ್ದ ರೂಪಗಳನ್ನು ಗಮನಿಸಿರಿ.

5. ನಡವಳಿಕೆ, ನಡವಳಿ ; ತಿಳಿವಳಿಕೆ, ತಿಳಿವಳಿ ಇವುಗಳಲ್ಲಿ ನಡೆ, ತಿಳಿ ಇವು ಧಾತುಗಳು. ಇವುಗಳಿಗೆ ವಳಿ, ವಳಿ **(ಇ)ಕೆ** ಈ ಕೃತ್ ಪ್ರತ್ಯಯಗಳು ಸೇರಿ ನಡೆವಳಿ, ನಡೆವಳಿಕೆ, ತಿಳಿವಳಿ, ತಿಳಿವಳಿಕೆ ಇತ್ಯಾದಿ ಕೃನ್ನಾಮಮಗಳು ಸಿದ್ಧವಾಗುತ್ತವೆ.

ಒಂಟಿ ಇದು ಒರ್, ಒನ್ ಎಂಬುದರಿಂದ ನಿಷ್ಪನ್ನವಾಗಿರಬಹುದಾದರೂ ಸಿದ್ಧ ಶಬ್ದವೆಂಬಂತಿದೆ. ಎರಡನೆಯ ಶಬ್ದ ಇಲ್ಲವೆ ಪ್ರತ್ಯಯಗಳಿಂದ ಹುಟ್ಟದಿರುವ ಶಬ್ದಗಳಿಗೆ ಸಿದ್ಧ ಶಬ್ದಗಳೆನ್ನುವರು. ಬೇರೆ ಪ್ರತ್ಯಯ ಇಲ್ಲವೆ ಶಬ್ದಗಳಿಂದ ಹುಟ್ಟುವ ಶಬ್ದಗಳು ಸಾಧಿತ ಶಬ್ದಗಳು. ಅವು ಮೂರು ಬಗೆಯಾಗಿವೆ. ಕೃದಂತ, ತದ್ಧಿತಾಂತ ಮತ್ತು ಸಮಾಸ ಎಂದು. ಕೃದಂತಗಳು ಧಾತುವಿನಿಂದ ಸಿದ್ಧವಾದರೆ ತದ್ಧಿತಾಂತಗಳು ನಾಮದಿಂದ ಸಿದ್ಧವಾಗುತ್ತವೆ. ಸಮಾಸಗಳನ್ನು ಒಂದನೆಯ ಭಾಗದ 2ನೆಯ ಅಂಶದಲ್ಲಿ ಅಭ್ಯಾಸ ಮಾಡಿದ್ದೀರಿ. ಇಲ್ಲಿ ಕೃದಂತಗಳನ್ನು ತದ್ಧಿತಾಂತಗಳನ್ನು ಕುರಿತು ಸಂಕ್ಷೇಪದಲ್ಲಿ ನೋಡೋಣ.

ಕೃದಂತಗಳಲ್ಲಿ ಕೃನ್ನಾಮ, ಕೃದಂತ ವಿಶೇಷಣ, ಕೃದಂತ ಧಾತು, ಮತ್ತು ಕೃದಂತ ಅವ್ಯಯ ಎಂದು ನಾಲ್ಕು ಪ್ರಕಾರಗಳಿವೆ.

ಕೃನ್ನಾಮ - ಬಳಸುವುದು, ಮಾಡುವುದು, ಪಡೆಯುವುದು, ತಿನ್ನುವಿಕೆ
ಕೃದಂತ ವಿಶೇಷಣ - ಒಟ್ಟುಗೂಡುವ, ಆದ, ಕೂಡಬರುವ, ಕೂಡದ
ಕೃದಂತ ಧಾತು - ಸಿದ್ಧಗೊಳಿಸು, ಉಳಿಸು, ಬಳಸು
ಕೃದಂತ ಅವ್ಯಯ - ಮಾಡುತ್ತ, ನೋಡದೆ, ಪಡೆಯಲು, ತಡೆದು, ಹಿಡಿದರೆ.

ತದ್ಧಿತಾಂತಗಳಲ್ಲಿ ಅನೇಕ ಪ್ರಕಾರಗಳಿವೆ. ಬೇರೆ ಬೇರೆ ಅರ್ಥದಲ್ಲಿ ಸೇರುವ ತದ್ಧಿತ ಪ್ರತ್ಯಯಗಳ ಮೇಲಿಂದ ಈ ಪ್ರಕಾರಗಳನ್ನು ಗುರುತಿಸಬಹುದು.

- ಗುಳಿ ಸ್ವಭಾವವುಳ್ಳವನು ಅರ್ಥದಲ್ಲಿ :
ಲಂಚಗುಳಿ. ಆಟಗುಳಿ
- ಇತಿ, ಗಿತ್ತಿ ಸ್ತ್ರೀ ಅರ್ಥದಲ್ಲಿ :
ಗೌಡಿತಿ, ಮಡಿವಳಿತಿ, ಅಗಸಗಿತ್ತಿ
- ತನ ಭಾವವಾಚಕ:
ಜಾಣತನ, ಒಳ್ಳೆಯತನ
- ಇಕೆ ಭಾವವಾಚಕ :
ಬುದ್ಧಿವಂತಿಕೆ, ಮಡಿವಂತಿಕೆ, ಸ್ವಂತಿಕೆ

ಇತ್ಯಾದಿ. ಇನ್ನೂ ಹಲವು ತದ್ಧಿತಪ್ರತ್ಯಯಗಳಿವೆ.

## 7.4 ಸಾರಾಂಶ

ಸಂಸ್ಕೃತಿ ಎಂಬುದು ಜನರ ಆಚರಣೆಯ ರೀತಿ ನೀತಿಗಳಿಂದ ಅನುಭವಕ್ಕೆ ಗೋಚರವಾಗುವ ವಿಷಯ. ನೂರಾರು ಸಾವಿರಾರು ವರ್ಷಗಳ ನಡವಳಿಕೆ, ತಿಳಿವಳಿಕೆಗಳ ಫಲವಾಗಿ ಸಮಾಜಕ್ಕೆ ಕೂಡಿಬರುವ ಸಂಸ್ಕಾರ ವಿಶೇಷವನ್ನು ಸಂಸ್ಕೃತಿ ಎಂದೆನ್ನುತ್ತೇವೆ.

ವ್ಯಕ್ತಿ ಸಮಾಜಜೀವಿ. ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶ ಇವು ಪರಸ್ಪರ ಸಂಬಂಧವುಳ್ಳವುಗಳು. ವ್ಯಕ್ತಿ ಮತ್ತು ಸಮಾಜ ಪರಸ್ಪರ ಹಿತದ ದೃಷ್ಟಿಯಿಂದ ಹೊಂದಿಕೊಂಡು ನಡೆಯದಿದ್ದರೆ ಸಮಾಜ ಅಪಾಯಕ್ಕೆ ಈಡಾಗುತ್ತದೆ.

ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಸಂಸ್ಕೃತಿಯ ಪ್ರವಾಹ ಒಂದೇ ಪ್ರಕಾರವಾಗಿ ಹರಿದು ಬಂದಿದೆ. ತಂದೆ, ತಾಯಿ, ಗುರುಹಿರಿಯರಿಗೆ ಪ್ರಥಮ ಸ್ಥಾನ ಕಲ್ಪಿಸುವ ಸಂಪ್ರದಾಯ ಇದೆ. ಅದರಂತೆ ಪಾಪ ಪುಣ್ಯ, ಸತ್ಯ ಧರ್ಮಗಳ ಅರಿವು ಆತ್ಮಸಾಕ್ಷಿಯಾಗಿ ಪರೋಪಕಾರ ಬಯಸುವುದೇ ಭಾರತೀಯ ಸಂಸ್ಕೃತಿಯ ಮುಖ್ಯ ಧ್ಯೇಯವಾಗಿದೆ.

ಸಂಸ್ಕೃತಿ ಎಂಬುದಕ್ಕೆ ವಿವಿಧ ರೀತಿಯ ಅರ್ಥವನ್ನು ಕೊಡುತ್ತಾರೆ. ಕೆಲವರು ಅರಿವು ಎಂದೂ ಇನ್ನು ಕೆಲವರು ಕುಲಾಚಾರ ಪದ್ಧತಿಗಳೆಂದೂ, ಮತ್ತೆ ಕೆಲವರು ಮನೋವೇದನೆಯ ಪ್ರಕಟರೂಪವೆಂದೂ ಮುಂತಾಗಿ ವ್ಯಾಖ್ಯಾನಿಸಿರುವರು.

ಕ್ರಿಯಾಪದವು ಕರ್ತೃಪದದ ಲಿಂಗವಚನಗಳನ್ನು ಅನುಸರಿಸುತ್ತದೆಂಬುದನ್ನು ಗುರುತಿಸುತ್ತೇವೆ.

ತರತಮ ಭಾವ ವ್ಯಕ್ತಮಾಡುವ ರೀತಿ, ದ್ವಂದ್ವಸಮಾಸಗಳನ್ನು ಪಠ್ಯ ಭಾಗದಿಂದ ಗುರುತಿಸುತ್ತೇವೆ.

## ಅಭ್ಯಾಸಗಳಿಗೆ ಉತ್ತರಗಳು

1. ಸಾವಿರಾರು ವರ್ಷಗಳ ನಡವಳಿಕೆ, ತಿಳಿವಳಿಕೆಗಳ ಫಲವಾಗಿ ಸಮಾಜಕ್ಕೆ ಕೂಡಿಬರುವ ಸಂಸ್ಕಾರ ವಿಶೇಷವನ್ನು ಸಂಸ್ಕೃತಿ ಎಂದು ಕರೆಯಬಹುದು.

2. ಒಂದು ಜನಾಂಗದ ಕುಲ, ಕುಟುಂಬ ಹಾಗೂ ಗುಂಪುಗಳಲ್ಲಿ ಕಂಡುಬರುವ ಅರಿವು, ಆಚಾರ, ನಡೆವಳಿಕೆ, ಪದ್ಧತಿಗಳನ್ನು ಜನತೆಯ ಸಂಸ್ಕೃತಿ - ಎಂಬುದು ಎಲ್ಲ ವ್ಯಾಖ್ಯೆಗಳಲ್ಲಿ ಕಂಡುಬರುವ ಸಾಮಾನ್ಯ ವಿಷಯ. ಅದು ಸಾವಿರಾರು ವರ್ಷಗಳ ಸಂಸ್ಕಾರ ವಿಶೇಷ; ವೈದುಷ್ಯಾದಿಗಳಿಂದ ಬದಲಾಗುವುದಿಲ್ಲ.

3. ಜನತೆಯ ನಂಬಿಕೆ, ನಡೆವಳಿಕೆ, ಆಚಾರ, ವಿಚಾರ ಪದ್ಧತಿಗಳಿಂದ ನಮ್ಮ ಅನುಭವಕ್ಕೆ ಗೋಚರವಾಗುವ ಸಂಸ್ಕಾರ ವಿಶೇಷವನ್ನು ಸಂಸ್ಕೃತಿಯೆಂದು ಕರೆಯುವುದು ಸೂಕ್ತ.

4. ಸಭ್ಯತೆ, ನಾಗರಿಕತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ಕರ್ತವ್ಯದಕ್ಷತೆ, ಸತ್ಯಶೀಲತೆ, ದೇಶ ಭಾಷಾಭಿಮಾನ, ತ್ಯಾಗ, ಶುಚಿತ್ವ, ಸ್ನೇಹ ಇವೇ ಮೊದಲಾದ ಸಂಸ್ಕೃತಿಯ ಸಾರಸರ್ವಸ್ವವೆನಿಸಿದ ಗುಣಸಂಪತ್ತು.

5. ವ್ಯಕ್ತಿ ಅಥವಾ ಸಮಾಜಕ್ಕೆ ಸಂಸ್ಕೃತಿ ಒಂದು ದಿನ ಒಟ್ಟುಗೂಡಿ ಬರತಕ್ಕುದಲ್ಲ. ನೂರಾರು ವರ್ಷಗಳ ಬದುಕಿನ ಅನುಭವ, ಆಲೋಚನೆಗಳ ಫಲವಾಗಿ ಬರತಕ್ಕುದು.

**ಅಭ್ಯಾಸ - 2**

(1) ಪ್ರಾಚೀನ ಕರ್ನಾಟಕದ ವಿಸ್ತಾರ, ಸಾಹಿತ್ಯ ಶಿಲ್ಪ ಸಂಗೀತ, ಜನತೆಯ ಸ್ವಭಾವ ಇತ್ಯಾದಿ ವಿಷಯವಾಗಿ ವಿಷಯ ಸಂಗ್ರಹಿಸಿ ಬರೆಯಬೇಕು.

(2) ಬಿಟ್ಟ ಸ್ಥಳದ ಪದಗಳು

ಅ) ಜೀವನಾನುಭವ
ಸಂಸ್ಕಾರ ವಿಷಯವನ್ನು

ಆ) ಮೌಲ್ಯತೆ

ಇ) ಓದುವ
ತೊಡುವ

ಈ) ಅ. ರಸಿಕತೆ
ಆ. ವಿಚಾರಪರತೆ
ಇ. ಇಂಗಿತಜ್ಞತೆ
ಈ. ಸ್ನೇಹಪರತೆ
ಉ. ಹಿಂಡುಹಿಂಡಾಗಿ
ಊ. ಕೈಯ + ಕೂಸು = ಕೈಗೂಸು.